# ಕಾರ್ಟೂನ್ ಪಾರ್ಕ್

ಉತ್ತರ ಕನ್ನಡ ಜಿಲ್ಲೆ ದಾಂಡೇಲಿಯಲ್ಲಿ ಒಂದು ವಿಶಿಷ್ಟ ಕಾರ್ಟೂನ್ ಪಾರ್ಕ್ ಜನ್ಮ ತಾಳಿದೆ. ಪ್ರತಿದಿನ ಮಕ್ಕಳು ಟಿ.ವಿ. ಪರದೆಯ ಮುಂದೆ ಕಾರ್ಟೂನ್ ಚಿತ್ರಗಳನ್ನು ವೀಕ್ಷಿಸುವುದು ಸರ್ವೇ ಸಾಮಾನ್ಯ. ಆದರೆ ಅದೇ ಕಾರ್ಟೂನ್ ಶಿಲ್ಪಗಳು ಇಲ್ಲಿರುವುದು ವಿಶೇಷ. ದಾಂಡೇಲಿ ಅರಣ್ಯ ಇಲಾಖೆಯವರು ದಂಡಕಾರಣ್ಯ ಪ್ರದೇಶದಲ್ಲಿ ಒಂದೇ ಒಂದು ಮರವನ್ನು ಕೂಡಾ ಕಡಿಯದೇ ಈ ಪಾರ್ಕ್ ನಿರ್ಮಿಸಿದ್ದಾರೆ.

**-ಬಳಕೂರು ವಿ.ಎಸ್.ನಾಯಕ, ಬೆಂಗಳೂರು**





# ಅಲಂಕೃತ ತೆಂಗಿನಕಾಯಿ

ಮದುವೆಯ ಸಮಾರಂಭದಲ್ಲಿ ಕಾಶೀಯಾತ್ರೆ ಮಾಡಿಸುವ ಸಂಪ್ರದಾಯವಿದೆ. ಕಾಶೀಯಾತ್ರೆಯಲ್ಲಿ ವರನಿಗೆ ಅಲಂಕರಿಸಿದ ಬೀಸಣಿಕೆ, ಛತ್ರಿ, ತೆಂಗಿನಕಾಯಿ ಕೊಡುವ ಪದ್ಧತಿಯಿದ್ದು, ಈ ಹಿಂದೆ ಅರಿಷಿಣ ಹಚ್ಚಿದ ತೆಂಗಿನಕಾಯಿ ಮಾತ್ರ ಕೊಡುತ್ತಿದ್ದರು. ಆದರೆ ಈಗ ಬಣ್ಣದ ಬಟ್ಟೆ, ಜರಿಬಟ್ಟೆ, ಮುತ್ತುಗಳಿಂದ ಅಲಂಕಾರ ಮಾಡಿದ ತೆಂಗಿನಕಾಯಿ ಕೊಡುತ್ತಿದ್ದಾರೆ. ಮದುವೆಯ ನಂತರ ಇದನ್ನು ಹಾಗೇ ಶೋಕೇಸಿನಲ್ಲಿ ಇಟ್ಟು ವೀಕ್ಷಿಸಬಹುದು.

**-ಆರ್.ಸವಿತ. ದಾವಣಗೆರೆ**



# ಹಿತ್ತಾಳೆಯ ಹಿಡಿಕೆ

ನಮ್ಮ ತಾತನವರು ಬಳಸುತ್ತಿದ್ದ ಕಪಾಟಿನ ಕದಕ್ಕೆ ಅಳವಡಿಸಿರುವ ಈ ಹಿತ್ತಾಳೆಯ ಹಿಡಿಕೆ ಸುಮಾರು ನೂರು ವರ್ಷಗಳಷ್ಟು ಹಳೆಯದು. ಬೀರುವಿನ ಬಾಗಿಲು ಎಳೆಯಲು ಬಳಕೆಯಾಗುವ ಈ ಹಿಡಿಕೆ ಸುಮಾರು ಎರಡಂಗುಲ ಉದ್ದವಿದ್ದು ಲೋಲಕದಂತೆ ತೂಗಾಡುತ್ತದೆ. ಗದೆಯ ಮೇಲ್ಭಾಗವನ್ನು ನೆನಪಿಸುವ ಈ ಹಿಡಿಯನ್ನು ಗಡಿಯಾರದ ಮುಳ್ಳಿನಂತೆ ವೃತ್ತಾಕಾರದಲ್ಲಿ ತಿರುಗಿಸಬಹುದು. ಅಲ್ಲದೆ ಮೇಲಕ್ಕೂ ಮತ್ತು ಕೆಳಕ್ಕೂ ಸಲೀಸಾಗಿ ಸರಿಸಬಹುದು. ಬೀರುವಿಗೆ ಭದ್ರತೆ ಒದಗಿಸುವ ಬೀಗದ ಸಮಗ್ರ ವ್ಯವಸ್ಥೆಯ ಒಂದು ಭಾಗವಾಗಿದೆ ಈ ಅಂದದ ಹಿಡಿಕೆ.

**-ಮಂಜುನಾಥ. ಡಿ.ಎಸ್., ಬೆಂಗಳೂರು**